

# ನಿರ್ಮಲ ಭಾರತ್ ಅಭಿಯಾನ





ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರಕಟಣೆ :
ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್
ಸೋಶಿಯಲ್ ಸರ್ವೀಸ್ (ಕ್ರಾಸ್)
ಬೆಂಗಳೂರು – 560084

ಪ್ರಕಾಶನಕ್ಕೆ ಸಹಕಾರ
ಕಾರಿಥಾಸ್ ಇಂಡಿಯಾ, ನವದೆಹಲಿ

# ನಿರ್ಮಲ ಭಾರತ್ ಅಭಿಯಾನ

ನಮ್ಮ ಸ್ಥಳೀಯ ಸಂಘ ಸಂಸ್ಥೆಗಳಿಗೆ ಇರುವ ಅತೀ ಕಷ್ಟದ ಕೆಲಸವೆಂದರೆ ಗ್ರಾಮ ನೈರ್ಮಲ್ಯದ ಕೆಲಸ. ಯಾವ ಸರ್ಕಾರವೇ ಆದರೂ ಹಳ್ಳಿಗರ ಸಹಕಾರವಿಲ್ಲದೆ ಅವರ ಅಭ್ಯಾಸವನ್ನು ಬದಲಿಸಲು ಸಾಧ್ಯಾವಿಲ್ಲ. ಅವರ ಸಹಕಾರ ದೊರೆತರೆ ಸರ್ಕಾರ ಮಾಡಬೇಕಾದ ಕೆಲಸ ತುಂಬಾ ಕಡಿಮೆ. ವೈದ್ಯರು ಮತ್ತು ವಿದ್ಯಾವಂತರು ಮನಪೂರ್ವಕವಾಗಿ ಹಳ್ಳಿಗಳಲ್ಲಿ ದುಡಿದರೆ ಹಳ್ಳಿಯ ಆರೋಗ್ಯ ಸಮಸ್ಯೆಯನ್ನು ಹೋಗಲಾಡಿಸಬಹುದು. ವೈಯಕ್ತಿಕ ಮತ್ತು ಸಾಮಾಜಿಕ ಆರೋಗ್ಯದ ಕಡೆಗೆ ಗಮನ ಹರಿಸುವುದು ಶಿಕ್ಷಣದ ಮೊದಲ ಹೆಜ್ಜೆ.

–ಮಹಾತ್ಮ ಗಾಂಧಿ

ಅನೈರ್ಮಲ್ಯದ ವಾತಾವರಣವು ಭಾರತದಲ್ಲಿ ಸಾರ್ವಜನಿಕ ಆರೋಗ್ಯದ ಸಾಧನೆಯ ದಾರಿಯಲ್ಲಿ ದೊಡ್ಡ ತೊಡಕಾಗಿ ಪರಿಣಮಿಸಿದೆ. ಗ್ರಾಮೀಣ ಮತ್ತು ನಗರ ಎನ್ನುವ ಬೇಧವಿಲ್ಲದೆ ಈ ಸವಾಲು ನಮ್ಮನ್ನು ಕಾಡುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಸರಕಾರ ನಿರಂತರವಾದ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ.

ಸ್ವಚ್ಛತೆಗಾಗಿಯೇ ಅನೇಕ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಇವುಗಳಲ್ಲಿ ಸಂಪೂರ್ಣ ನೈರ್ಮಲ್ಯ ಆಂದೋಲನವು ಒಂದಾಗಿದೆ. ಈಗ ಈ ಆಂದೋಲನವನ್ನೇ ಹೊಸದಾಗಿ ನಿರ್ಮಲ ಭಾರತ್ ಅಭಿಯಾನ ಎಂದು ಹೆಸರಿಸಲಾಗಿದೆ. ನಮ್ಮ ಗ್ರಾಮಗಳು ಸ್ವಚ್ಛತೆಯ ತಾಣವಾಗಬೇಕು. ಬಯಲು ಶೌಚಾಲಯಕ್ಕೆ ವಿದಾಯ ಹೇಳಬೇಕು. ಹಳ್ಳಿಗಳ ಪ್ರತಿ ಕುಟುಂಬವು ಶೌಚಾಲಯ ಹೊಂದಬೇಕು. ಅದಕ್ಕಾಗಿ ಇದನ್ನು ಅಂದೋಲನ ರೂಪದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಸರ್ಕಾರವು ಸಮುದಾಯದ ಸಹಭಾಗಿತ್ವದೊಂದಿಗೆ ಜಾರಿಗೊಳಿಸುತ್ತಿದೆ.

## ಸಂಪೂರ್ಣ ನೈರ್ಮಲ್ಯ ಆಂದೋಲನದ ಉದ್ದೇಶಗಳು

- ಗ್ರಾಮೀಣ ಜನರ ಜೀವನ ಗುಣಮಟ್ಟ ಮತ್ತು ಆರೋಗ್ಯದಲ್ಲಿ ಸುಧಾರಣೆ ತರುವುದು
- ಜನರಿಗೆ ಶುಚಿತ್ವದ ಬಗ್ಗೆ ಅರಿವು, ಮಾಹಿತಿ ಮತ್ತು ಆರೋಗ್ಯ ಶಿಕ್ಷಣ ನೀಡುವುದು
- ಗ್ರಾಮೀಣ ಪ್ರದೇಶದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ನೈರ್ಮಲ್ಯ ಸೌಲಭ್ಯ ಒದಗಿಸುವುದು
- ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಶುಚಿತ್ವ ಮತ್ತು ನೈರ್ಮಲ್ಯದ ಬಗ್ಗೆ ಹವ್ಯಾಸವನ್ನು ಬೆಳೆಸುವುದು

- ಬಯಲು ಮಲವಿಸರ್ಜನೆಯನ್ನು ಹೋಗಲಾಡಿಸುವುದು
- ಕಡಿಮೆ ವೆಚ್ಚದಲ್ಲಿ ಸೂಕ್ತ ತಾಂತ್ರಿಕತೆಯುಳ್ಳ ನೈರ್ಮಲ್ಯದ ಸೌಲಭ್ಯಗಳನ್ನು ಪ್ರೋತ್ಸಾಹಿಸುವುದು

## ಆಂದೋಲನದ ಮುಖ್ಯ ಚಟುವಟಿಕೆಗಳು

ಸಂಪೂರ್ಣ ನೈರ್ಮಲ್ಯ ಆಂದೋಲನಕ್ಕೆ ಕೆಲವು ಮುಖ್ಯ ಆದ್ಯತೆಗಳಿವೆ. ಅವುಗಳು ಹೀಗಿವೆ:

1. ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ
2. ಶಾಲಾ ಶೌಚಾಲಯ ನಿರ್ಮಾಣಕ್ಕೆ ವ್ಯವಸ್ಥೆ
3. ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ
4. ಸಮುದಾಯ ಶೌಚಾಲಯ ನಿರ್ಮಾಣ
5. ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಮತ್ತು ಉತ್ಪಾದನಾ ಕೇಂದ್ರಗಳು

## ಶೌಚಾಲಯ ನಿರ್ಮಾಣಕ್ಕೆ ಆರ್ಥಿಕ ಸಹಾಯ

1. ವೈಯಕ್ತಿಕ ಶೌಚಾಲಯ: ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ಧನ ನೀಡುವುದು ಇದರ ಉದ್ದೇಶ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಈ ಪ್ರೋತ್ಸಾಹಧನ ನೀಡಲಾಗುವುದು. ಅದರಂತೆ ಒಂದು ಕುಟುಂಬಕ್ಕೆ ರೂ.4,700/- ಗಳನ್ನು ನೀಡಲಾಗುವುದು.

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸೌಲಭ್ಯಗಳು :

| ಕ್ರ.ಸಂ. | ವಿವರ | ಅಕುಶಲ ಕೂಲಿ | ಸಾಮಗ್ರಿ ವೆಚ್ಚ |
|---|---|---|---|
| 1 | ವೈಯುಕ್ತಿಕ ಶೌಚಾಲಯ | 3,100 | 1,400 |
| 2 | ಅಂಗನವಾಡಿ ಶೌಚಾಲಯ | 6,500 | 6,640 |
| 3 | ಶಾಲಾ ಶೌಚಾಲಯ | 3,500 | 31,500 |
| 4 | ಘನ-ದ್ರವ ತ್ಯಾಜ್ಯ ವಿಲೇವಾರಿ ಘಟಕ | 1,75,000 | 3,25,000 |

2. ಶಾಲಾ ಶೌಚಾಲಯ : ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಮಾಡುವುದು ಇದರ ಗುರಿ, ಹೆಣ್ಣು ಮತ್ತು ಗಂಡುಮಕ್ಕಳಿಗೆ ಪ್ರತ್ಯೇಕ ಶೌಚಾಲಯುಗಳನ್ನು ಮಾಡಿಕೊಡಲಾಗುವುದು. ಇದಕ್ಕಾಗಿ ರೂ.20,000/-ರೂ.ಗಳ ಅನುದಾನವನ್ನು ನೀಡಲಾಗುವುದು. ಸಮುದಾಯ ಸಹಭಾಗಿತ್ವದಲ್ಲಿ ಇದು ನಿರ್ಮಾಣವಾಗಬೇಕು. ಅದಕ್ಕಾಗಿ ಸಮುದಾಯದಿಂದ ರೂ.2000/-ಗಳನ್ನು ಭರಿಸಬೇಕು.